## ಹಳೆಯದೆಂದು ಥಟ್ ಅಂತ ಹೇಳಬಹುದು

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ನೋಡಲು ಕಾತರದಿಂದ ಕಾಯುತ್ತಿದ್ದ ದಿನಗಳು ಇದ್ದವು. ಈಗ ಅದರಲ್ಲಿ ಹಳೇ ಕಂತುಗಳೇ ಮರು ಪ್ರಸಾರ ಮಾಡುತ್ತಿರುವುದರಿಂದ ನೋಡಲು ಬೇಸರವಾಗಿ ಟೀವಿಯನ್ನೇ ಆಫ್ ಮಾಡುತ್ತೇವೆ. ನಿರೂಪಕರ ವೇಷಭೂಷಣ ನೋಡುತ್ತಿದ್ದಂತೆಯೇ ನಮ್ಮ ಮಕ್ಕಳು ಇದು ಹಳೆಯ ಕಂತು ಎಂದು ಗುರುತಿಸುತ್ತಿದ್ದಾರೆ. ಹೊಸ ಕಂತುಗಳನ್ನು ತಯಾರು ಮಾಡುವ ತನಕ ಅದರ ಬದಲಿಗೆ ಸುಗಮ ಸಂಗೀತ ಇಲ್ಲವೇ ಸಿನಿಮಾ ಸಂಗೀತವನ್ನಾದರೂ ಏಕೆ ಪ್ರಸಾರ ಮಾಡಬಾರದು ಎಂದು ಅನ್ನಿಸುತ್ತದೆ.

—ಪದ್ಮಶ್ರೀ ಎಚ್.ಎಸ್., ಬೆಂಗಳೂರು

## ಸುಖೀ ದಾಂಪತ್ಯ 'ಮಾಯಾಮೃಗ'ವೆ?

ಸಿರಿ ಕನ್ನಡದ 'ಮತ್ತೆ ಮಾಯಾಮೃಗ' ಧಾರಾವಾಹಿಯಲ್ಲಿ ಮದುವೆಯಾಗಿರುವ ಯಾವ ಜೋಡಿಯೂ ಸಹಜೀವನ ನಡೆಸುತ್ತಿಲ್ಲ. ಧಾರಾವಾಹಿಯ ಪ್ರಾರಂಭದಲ್ಲೇ ಕಮಲಮ್ಮನ ಗಂಡ ಲಕ್ಷ್ಮೀನಾರಾಯಣ ಶಾಸ್ತ್ರಿ ಮನೆ ಬಿಟ್ಟು ಹೋಗಿದ್ದರು. ಅಂತೆಯೇ ಮಾಳವಿಕಾ, ವಿದ್ಯಾ, ಬೃಂದಾ ಪತಿಯಿಂದ ದೂರವಾದವರೇ.

ಇನ್ನು ಶ್ರೀಲಕ್ಷ್ಮಿ ಗಂಡ ರಘುರಾಮ್ ಮನೆ ಬಿಟ್ಟು ತುಂಬಾ ವರ್ಷಗಳ ನಂತರ ಬಂದಿದ್ದಾರೆ. ಆದರೂ ಸಂಬಂಧ ಸರಿ ಇಲ್ಲ. ಪೂರ್ವಿ ಹಾಗೂ ಸಚಿನ್ ದಾಂಪತ್ಯದಲ್ಲೂ ಅನುಮಾನದ ಒಡಕು ಮೂಡುತ್ತಿರುತ್ತದೆ. ಈ ಮೂಲಕ ಏನು ಸಂದೇಶ ಕೊಡುತ್ತಿದ್ದಾರೆ ಎಂದು ಗೊತ್ತಾಗುತ್ತಿಲ್ಲ.

—ಭಾರತೀ ಗಂಗಾಧರ್, ಬೆಂಗಳೂರು

## ಅಮ್ಮ ದ್ವೇಷ ಸಾಧಿಸಬಲ್ಲಳೆ?

ಕಲರ್ಸ್ ಕನ್ನಡದ 'ಒಲವಿನ ನಿಲ್ದಾಣ'ದ ನಾಯಕ ಸಿದ್ಧಾಂತ ಮತ್ತು ನಾಯಕಿಯನ್ನು ಆಕೆಯ ತಾತನ ಸಹಾಯದಿಂದ ಮದುವೆ ಆಗುತ್ತಾನೆ. ನಾಯಕನ ತಾಯಿಗೆ ಆ ತಾತನ ಮೇಲೆ ದ್ವೇಷ ಇರುವುದರಿಂದ ತನ್ನ ಸೊಸೆಯನ್ನು ಹೀನಾಯವಾಗಿ ನೋಡಿಕೊಳ್ಳುತ್ತಾಳೆ, ಮೂದಲಿಸುತ್ತಾಳೆ. ತನ್ನ ಮಗನ ಮೇಲೂ ಆ ದ್ವೇಷವನ್ನು ಸಾಧಿಸುತ್ತಾಳೆ. ಸರಿಯಾಗಿ ಊಟವನ್ನೂ ಕೊಡುವುದಿಲ್ಲ. ಇದು ನಿಜಕ್ಕೂ ತಾಯಿತನಕ್ಕೆ ಮಾಡುವ ಅವಮಾನ ಎಂದೇ ಅನ್ನಿಸುತ್ತದೆ.

—ಶರ್ಮಿಷ್ಠಾ ರಘು, ಬೆಂಗಳೂರು

ವಾರದ ಪತ್ರ

## 'ಸುಲಿಗೆ ಸಂಸಾರ' ಅನ್ನಬಹುದಿತ್ತು

ವಿಭಿನ್ನ ಆಲೋಚನೆಗಳಿಂದ 'ರಾಜಾ ರಾಣಿ', 'ನಮ್ಮಮ್ಮ ಸೂಪರ್ ಸ್ಟಾರ್', 'ಮಜಾ ಟಾಕೀಸ್', 'ಗಿಚ್ಚಿ ಗಿಲಿ ಗಿಲಿ' ರೀತಿಯ ಭಿನ್ನ ಕಾರ್ಯಕ್ರಮಗಳನ್ನು ಸೃಜನ್ ಲೋಕೇಶ್ ನೀಡಿದ್ದಾರೆ. ಈಗ 'ಫ್ಯಾಮಿಲಿ ಗ್ಯಾಂಗ್ ಸ್ಟಾರ್' ಮಾಡುತ್ತಿದ್ದಾರೆ. ಮೊದಲೆಲ್ಲ ಒಂದಾದರೂ ಕನ್ನಡ ಪದವನ್ನು ಶೀರ್ಷಿಕೆಯಲ್ಲಿ ಬಳಸುತ್ತಿದ್ದರು. ಈಗ ಪೂರ್ಣ ಇಂಗ್ಲಿಷ್ ಪದಗಳ ಹೆಸರಿಟ್ಟಿದ್ದಾರೆ. ಇದರ ಬದಲು ಕನ್ನಡದಲ್ಲೇ 'ಲೂಟಿ ಕುಟುಂಬ' ಅಥವಾ 'ಸುಲಿಗೆ ಸಂಸಾರ' ಎಂದು ಹೆಸರು ಇಡಬಹುದಿತ್ತು. ನಮ್ಮ ಕ್ರಿಯಾಶೀಲ ಕಾರ್ಯಗಳಿಗೆ ಕನ್ನಡದ ಹೆಸರಿಡುವುದು ಕಷ್ಟ ಅಲ್ಲ.

—ನಾ.ರಾ. ಜ್ಯೋತಿ, ಬೆಂಗಳೂರು

## ದಾಖಲೆಯ 'ಮುದ್ದು'

ಸ್ಟಾರ್ ಸುವರ್ಣದಲ್ಲಿ ಬರುತ್ತಿದ್ದ 'ಮುದ್ದುಲಕ್ಷ್ಮಿ' ವೀಕ್ಷಕರ ತಲೆ ಚಿಟ್ಟು ಹಿಡಿಸಿತ್ತು. ಯಾವಾಗ ಮುಗಿಯುತ್ತೋ ಎನ್ನುವ ಭಾವನೆ ಮೂಡಿಸಿತ್ತು. ಹೇಗೋ ಅದು ಮುಗಿಯಿತು ಎನ್ನುತ್ತಿದ್ದಂತೆ, ಆ ಸ್ಥಾನದಲ್ಲಿ ಮುದ್ದುಲಕ್ಷ್ಮಿಯ ಮಕ್ಕಳ ಕಥೆಯನ್ನು 'ಮುದ್ದುಮಣಿಗಳು' ಎಂಬ ಹೆಸರಿನಲ್ಲಿ ಆರಂಭಿಸಿದರು. ಆದರೆ ಅದರಲ್ಲಿಯೂ ಶಾರ್ವರಿಯ ನೆರಳು ಬಿದ್ದು ದೃಷ್ಟಿಯ ಸಾವಾಯಿತು. ಧಾರಾವಾಹಿ ಮುಗಿಸಬಹುದೆ ಎಂದು ಕಾಯುತ್ತಿದ್ದ ನಮಗೆ 'ಓ ಮುದ್ದುಮನಸೇ' ಎಂದು ಮುಂದುವರಿಸುತ್ತಿದ್ದಾರೆ.

—ಅನುಪಮಾ ಆರ್. ರಾವ್, ಮಂಗಳೂರು



## ಗೊಂದಲದಲ್ಲೇ ಮುಗಿದ 'ಗಿಣಿರಾಮ'

ಇತ್ತೀಚೆಗೆ ಕೆಲವು ಧಾರಾವಾಹಿಗಳು ಹಠಾತ್ತಾಗಿ ಮುಕ್ತಾಯಗೊಳ್ಳುತ್ತಿವೆ. ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿದ್ದ ಉತ್ತರ ಕನ್ನಡ ಭಾಷಾ ಸೊಗಡಿನ 'ಗಿಣಿರಾಮ' ಇದೀಗ ಆ ಗುಂಪಿಗೆ ಸೇರಿದಂತೆ ಆಗಿದೆ. ದೇಶಪಾಂಡೆ ಮನೆತನದ ಮುದ್ದಿನ ಸೊಸೆ ಮಹತಿ ಮತ್ತು ಶಿವರಾಮ್ ಒಡನಾಟದ ರೋಚಕ ಕಥೆ ತರಾತುರಿಯ ವೇಗದಲ್ಲಿ ಹಲವಾರು ಉತ್ತರ ಸಿಗದ ಪ್ರಶ್ನೆಗಳಿಂದ ಗೊಂದಲಮಯವಾಗಿತ್ತು. ವಿಭಿನ್ನ ರೀತಿಯಲ್ಲಿ ಹೊಸ ತಿರುವು ಪಡೆದುಕೊಂಡು 'ದೈತ್ಯ ಸಂಹಾರ'ವಾಗಿದ್ದು ಸಮಂಜಸವಾಗಿರಲಿಲ್ಲ.

—ಹೆಚ್.ವಿ. ಶ್ರೀಧರ್, ಬೆಂಗಳೂರು

## ನಿಲ್ಲಲಿ ಹಿಂಸಾ ಆನಂದ

ಝೀ ಕನ್ನಡದ 'ಸತ್ಯ'ದ ಇತ್ತೀಚಿನ ಕಂತಿನಲ್ಲಿ ಕೀರ್ತನಾ, ಸತ್ಯಳಿಗೆ ಕಾಲು ಅಡ್ಡ ಕೊಟ್ಟು ಬೀಳಿಸುವುದು ಬಾಲಿಶ ಎನ್ನಿಸಿತು. ಕೀರ್ತನಾ ಸಾಲದೆಂಬಂತೆ ದಿವ್ಯಾ ಸಹ ಖಳನಾಯಕಿಯ ಸಾಲಿಗೆ ಸೇರುತ್ತಿದ್ದಾಳೆ.

ಸೀತಮ್ಮ ಯಾವಾಗಲೂ ಸತ್ಯಳ ಮೇಲೆ ಅನುಮಾನ ಮತ್ತು ಕೊಂಕು ನುಡಿಯುತ್ತಲೇ ಇರುತ್ತಾಳೆ. 'ಶ್ರೀರಸ್ತು ಶುಭಮಸ್ತು'ವಿನ ಶಾರ್ವರಿ, ಸುಧಾರಾಣಿ ಯಾರು ಎಂದು ಅರಿಯುವ ಮುನ್ನವೇ ಏಕವಚನದಲ್ಲಿ ಮಾತನಾಡುವುದು ಸರಿ ಕಾಣಲಿಲ್ಲ. ಧಾರಾವಾಹಿ ನಿರ್ದೇಶಕರಿಗೆ ವೀಕ್ಷಕರ ಅಭಿಪ್ರಾಯ ತಲುಪುತ್ತಿಲ್ಲ ಅನಿಸುತ್ತದೆ. ಖಳನಾಯಕಿಯ ಆರ್ಭಟ ಕಮ್ಮಿ ಮಾಡಲು ಪ್ರಯತ್ನ ನಡೆಸಲಿ.

—ಅರುಣ್ ಕೆ.ಎನ್., ಬೆಂಗಳೂರು

## ನಮ್ಮ ಅಪೇಕ್ಷೆ ನೃತ್ಯ, ಸರ್ಕಸ್ ಅಲ್ಲ

ಝೀ ಕನ್ನಡ 'ಡಾನ್ಸ್ ಕರ್ನಾಟಕ ಡಾನ್ಸ್' ನೋಡಿ ಸ್ಪರ್ಧಿಗಳೆಲ್ಲ ತಮ್ಮ ಶಕ್ತಿ ಮೀರಿ ಡಾನ್ಸ್ ಮಾಡಿ, ವೀಕ್ಷಕರ ಮೆಚ್ಚುಗೆ ಗಳಿಸುತ್ತಿದ್ದಾರೆ. ಆದರೆ, ಈ ಕಾರ್ಯಕ್ರಮದಲ್ಲಿ ಪ್ರಜ್ವಲ್ ಮತ್ತು ಚೈತನ್ಯ ಜೋಡಿ ಇಬ್ಬರೂ ಕಣ್ಣು ಕಟ್ಟೊಂಡು, ಸರ್ಕಸ್ಸಿನಲ್ಲಿ ಮಾಡುವ ಹಾಗೆ ಎತ್ತರದ ಜಿಗಿತ, ಭಯಂಕರ ಕಸರತ್ತು ಮಾಡಿ ವೀಕ್ಷಕರಿಗೆ ದಿಗಿಲು ಹುಟ್ಟಿಸಿದರು. ತೀರ್ಪುಗಾರರೂ ಹೆದರಿಕೆ ವ್ಯಕ್ತಪಡಿಸಿದರು!

ವೀಕ್ಷಕರಾದ ನಾವು ಈ ಕಾರ್ಯಕ್ರಮದಲ್ಲಿ ಶುದ್ಧ ಮನರಂಜನೆ ಬಯಸುತ್ತೇವೆಯೇ ಹೊರತು ಇಂತಹ ಭೀತಿಯ ಕಸರತ್ತನ್ನಲ್ಲ. ಅದರಲ್ಲೂ ಮಕ್ಕಳು ಹೀಗೆ ಮಾಡುವುದನ್ನು ನೋಡುವಾಗ ಹಿಂಸೆಯಾಗುತ್ತದೆ. ಮಾತ್ರವಲ್ಲ ಸ್ವಲ್ಪ ಹೊತ್ತು ಮನಸು ತಳಮಳಕ್ಕೆ ಒಳಗಾಗುತ್ತದೆ.

—ನಾರಾಯಣ ಯಾಜಿ ಶಿರಾಲಿ